# ಮುನ್ನುಡಿ

ಆಧುನಿಕ ವಿದ್ಯಾಭ್ಯಾಸವು ಸ್ಪರ್ಧಾತ್ಮಕವಾಗಿರುವುದು ತಮಗೆಲ್ಲರಿಗೂ ತಿಳಿದ ವಿಚಾರ. ಈ ವಾತಾವರಣಕ್ಕೆ ಅನುಗುಣವಾಗಿ ಪ್ರತಿಶಾಲೆಯು ಕಲಿಕಾ ವಿಧಾನಗಳಲ್ಲಿ ಬದಲಾವಣೆಯನ್ನು ಮಾಡುವುದು ಅತೀ ಅಗತ್ಯವಾಗಿದೆ. ಗ್ರಾಮೀಣ ಪ್ರದೇಶದ ಮಕ್ಕಳ ಕಲಿಕಾ ಮಟ್ಟವು ವಿವಿಧ ಕಾರಣಗಳಿಂದಾಗಿ ಕೆಳಮಟ್ಟಕ್ಕೆ ಬರುವುದು ಸಹಜವಾಗಿದೆ. ಅದಕ್ಕಾಗಿ ಅಧ್ಯಾಪಕರಾದ ನಾನು ಅದನ್ನು ಮನಗಂಡು ಅನುಯೋಜ್ಯವಾದ ಕಲಿಕಾ ವಾತಾವರಣವನ್ನು ಸೃಷ್ಟಿಸುವುದು ಇಂದಿನ ಅನಿವಾರ್ಯವಾಗಿದೆ.

ಶಿಕ್ಷಣವನ್ನು ಸಮಗ್ರ ಮತ್ತು ಸಬಲೀಕರಣಗೊಳಿಸಲು ಮಾನಸಿಕ, ಹಸ್ತಚಾಲಿತ ಮತ್ತು ನೈತಿಕ ಕೆಲಸವನ್ನು ಸಂಯೋಜಿಸುವುದು ನಮ್ಮ ಗುರಿಯಾಗಬೇಕು. ಸ್ಥಳೀಯ ಅಗತ್ಯತೆಗಳು ಸಂಸ್ಕೃತಿ ಮತ್ತು ಜೀವನೋಪಾಯದ ಅವಕಾಶಗಳಿಗೆ ಅನುಗುಣವಾಗಿ ಶಿಕ್ಷಣವನ್ನು ಒದಗಿಸುವುದು ನಮ್ಮ ಕರ್ತವ್ಯವಾಗಬೇಕು. Education is Development “All round” implies harmonious development. “Drawing out the best recognized a great poteofiality coiled up in the child which can be realised and development to its perfection through education”

ಇದನ್ನೆಲ್ಲ ಮನಗಂಡು ಅಧ್ಯಾಪಕರು ಮಗುವಿನ ಕಲಿಕಾ ಮಟ್ಟವನ್ನು ಯಾವ ರೀತಿಯಲ್ಲಿ ಅಭಿವೃದ್ಧಿಪಡಿಸಬಹುದು ಎಂಬುದನ್ನು ಮನಗಂಡು ಇದಕ್ಕೆ ಪರಿಹಾರ ಭೋದನೆ ಮಾಡಬೇಕು. ಇದಕ್ಕಾಗಿ ಹಲವಾರು ಓದುವಿಕೆಗೆ ಮತ್ತು ಬರವಣಿಗೆಗೆ ಸಂಬಂಧಪಟ್ಟ ಹಲವಾರು ಚಟುವಟಿಕೆಗಳನ್ನು ಕಂಡುಕೊಂಡು ಮಕ್ಕಳ ಕಲಿಕಾ ಮಟ್ಟವನ್ನು ಹೆಚ್ಚಿಸುವಲ್ಲಿ ಸಹಾಯ ಮಾಡುವ ಅಗತ್ಯವಿದೆ. ಮಗುವಿನ ಓದುವಿಕೆ ಮತ್ತು ಬರವಣಿಗೆಯನ್ನು ಉತ್ತಮಪಡಿಸಲು ಹಲವಾರು ಭಾಷಾಪರವಾದ ತಂತ್ರಗಳನ್ನು ಅಳವಡಿಸಬೇಕು.

## ಚರಿತ್ರೆ

ಬಾಳೆಮೂಲೆ ಶಾಲೆ ಇರುವ ಪರಿಸರದಲ್ಲಿ ಸುಮಾರು 26 ವರ್ಷಗಳ ಹಿಂದೆ ಊರ ಗಣ್ಯ ವ್ಯಕ್ತಿಗಳ ಹಾಗೂ ವಿದ್ಯಾವಂತರ ಸಹಾಯದಿಂದ ಮುಳಿ ಶೆಡ್ಡಿನಲ್ಲಿ ತರಗತಿಗಳು ನಡೆಸಲ್ಪಡುತ್ತಿದ್ದವು. ಈ ಪ್ರದೇಶವು ವಿದ್ಯಾಭ್ಯಾಸದಲ್ಲಿ ತುಂಬಾ ಹಿಂದುಳಿದಿದ್ದು ಇಲ್ಲಿ ಎಸ್.ಸಿ. ಮತ್ತು ಎಸ್.ಟಿ. ಕುಟುಂಬದವರು ಹೆಚ್ಚಾಗಿದ್ದರು. ಸಾರಿಗೆ ಸಂಪರ್ಕ ಇಲ್ಲದ ಪ್ರದೇಶವಾಗಿತ್ತು. ಈ ಮಕ್ಕಳಿಗೆ ದೂರದ ಶಾಲೆಗೆ ಹೋಗಲು ಸೌಕರ್ಯ ಇಲ್ಲದ ಕಾರಣ ಇಲ್ಲಿ ಒಂದು ಶಾಲೆಯನ್ನು ಆರಂಭಿಸಲು ಮನವಿ ಪತ್ರಗಳನ್ನು ವಿದ್ಯಾಭ್ಯಾಸ ಇಲಾಖೆಗೆ ನಿರಂತರ ಕಳುಹಿಸುತ್ತಿದ್ದರು. ಇದರ ಫಲವಾಗಿ ಡಿಪಿಇಪಿ ಮುಖಾಂತರವಾಗಿ ಬಾಳೆಮೂಲೆಯಲ್ಲಿ ಶಾಲೆಯನ್ನು ಸ್ಥಾಪಿಸಲು ಸರಕಾರವು ಸುತ್ತೋಲೆಯನ್ನು ಜಾರಿಗೊಳಿಸಿತು. order No. B2/3463/98 dated 22-07-1998. ಅದಕ್ಕನುಗುಣವಾಗಿ 1998ರಲ್ಲಿ ಏಕೋಪಾಧ್ಯಾಯ ಸಹಾಯದಿಂದ ಒಂದನೇ ತರಗತಿಯ ಆರಂಭಿಸಿದರು. ಶ್ರೀ ಜನಾರ್ಧನ ನಾಯಕರು ವಿದ್ಯಾಭ್ಯಾಸ ಇಲಾಖೆಯವರಿಂದ ಪ್ರತಿನಿಧಿಯಾಗಿ ನೇಮಿಸಲ್ಪಟ್ಟರು. ನಂತರ 1ರಿಂದ 4ರವರೆಗೆ ಪ್ರತೀ ತರಗತಿಗೆ ಆಧ್ಯಾಪಕರನ್ನು ನೇಮಿಸಲಾಯಿತು. ಇಲ್ಲಿ ನಾಲ್ಕು ತರಗತಿಯಲ್ಲದೆ ಮತ್ತು ಹೆಚ್ಚುರಿಯಾಗಿ 2 ತರಗತಿ ಕೊಣೆಗಳು ನಿರ್ಮಿಸಲಾಯಿತು. ಪ್ರಸ್ತುತ ವಿದ್ಯಾಭ್ಯಾಸ ನಿಯಮದ ಪ್ರಕಾರ ಸುಸಜ್ಜಿತವಾದ RCC ಕಟ್ಟಡಗಳ ತರಗತಿ ಕೋಣೆಗಳು ಕಾರ್ಯಾಚರಿಸುತ್ತಿದೆ. ಎಣ್ಮಕಜೆ ಗ್ರಾಮ ಪಂಚಾಯತಿನ ಅನುದಾನದಿಂದ ಸುಸಜ್ಜಿತ ಶೌಚಾಲಯಗಳು, ಉತ್ತಮವಾದ ಆಟದ ಮೈದಾನ ನಮ್ಮ ಶಾಲೆಗಿದೆ. ಅದೇ ರೀತಿ ಅನೇಕ ಅಧ್ಯಾಪಕರು ಈ ಶಾಲೆಯಲ್ಲಿ ಸೇವೆಯನ್ನು ಸಲ್ಲಿಸಿದ್ದು ಮಾರ್ಗದರ್ಶಕರಾಗಿ ಉತ್ತಮ ಮಾದರಿಯಾಗಿ ನಮಗೆ ದಾರಿದೀಪವಾಗಿರುವುದು ಸಂತೋಷದ ವಿಷಯ.

ತರಗತಿ ಲೈಬ್ರರಿ, ಶಾಲಾ ಲೈಬ್ರರಿ, ಟೀಚಿಂಗ್ ಎಯ್ಡ್, ಆಧುನಿಕ ಮಾಹಿತಿ ತಂತ್ರಜ್ಞಾನ (ITI) ಸಹಾಯದೊಂದಿಗೆ ಈ ಚಟುವಟಿಕೆಗಳನ್ನು ಉತ್ತಮಗೊಳಿಸಬಹುದು. ಈ ಮೂಲಕ ಮಕ್ಕಳನ್ನು ಓದುವಿಕೆ ಮತ್ತು ಬರವಣಿಗೆಯಲ್ಲಿ ಯಶಸ್ವಿಯಾಗುವಂತೆ ಮಾಡಬಹುದು.

ಆಧುನಿಕ ಕಾಲಘಟ್ಟದಲ್ಲಿ ಇಂಗ್ಲೀಷ್ ಭಾಷೆಯ ಅನಿವಾರ್ಯತೆ ಸಣ್ಣ ತರಗತಿಯಲ್ಲಿಯೂ ಹೆಚ್ಚುತ್ತಾ ಹೋಗುತ್ತಿದೆ. ಹಾಗಾಗಿ ಇಂಗ್ಲೀಷ್ ಕಲಿಕೆಯ ಅನಿವಾರ್ಯತೆ ಶಿಕ್ಷಕರ ಮುಂದಿದೆ. ಅದಕ್ಕಾಗಿ ನಿರಂತರ ಇಂಗ್ಲೀಷ್ ಆಲಿಸುವಿಕೆಗೆ ಅವಕಾಶ ನೀಡುವ ಅಗತ್ಯವಿದೆ. ಆದುದರಿಂದ ಈ ಶೈಕ್ಷಣಿಕ ವರ್ಷದಲ್ಲಿ ಕನ್ನಡ ಮತ್ತು ಇಂಗ್ಲೀಷ್ ಭಾಷಾ ವ್ಯವಹಾರಗಳು ಅತ್ಯುತ್ತಮವಾಗಿ ಕೈಗೊಳ್ಳಲು ಸಾಧ್ಯವಾಗಬೇಕೆನ್ನುವುದೇ ನಮ್ಮ ಈ ಯೋಜನೆಯ ಗುರಿಯಾಗಿದೆ.

ಮಗು ಭಾಷೆ ಕಲಿಸುವುದರೊಂದಿಗೆ ನಿತ್ಯ ಜೀವನದಲ್ಲಿ ವ್ಯವಹಾರವನ್ನು ಮಾಡುವ ಜ್ಞಾನವನ್ನು ಆರ್ಜಿಸುವುದು ಅಗತ್ಯವಾಗಿದೆ. ಅದಕ್ಕಾಗಿ ನಮ್ಮ ಸುತ್ತಮುತ್ತಲಿನ ಪರಿಸರದೊಂದಿಗೆ ವ್ಯವಹರಿಸುವ, ಅದನ್ನು ಪ್ರೀತಿಸಿ ತನ್ನ ಜೀವನದಲ್ಲಿ ಅಳವಡಿಸಿಕೊಂಡು ಪ್ರಕೃತಿ ಪ್ರಿಯ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವ ಭಾವೀ ವಿದ್ಯಾರ್ಥಿಗಳನ್ನು ಸೃಷ್ಟಿಸುವ ಅಗತ್ಯ ಅಧ್ಯಾಪಕರಿಗಿದೆ. ನಿತ್ಯ ಜೀವನದಲ್ಲಿ ಸುಲಭವಾಗಿ ವ್ಯವಹರಿಸುವ ಅರಿವನ್ನು ಮೂಡಿಸಿ ಭವಿಷ್ಯದಲ್ಲಿ ಮಗು ಜೀವನವನ್ನು ನಡೆಸುವ ಪಾಠವನ್ನು ಕಲಿಯುವ ವಿದ್ಯಾಭ್ಯಾಸವನ್ನು ಒದಗಿಸುವ ಶಿಕ್ಷಣವನ್ನು ಕೊಡುವ ಉದ್ದೇಶದಿಂದ ಈ ವರ್ಷ ಈ ಯೋಜನೆಯನ್ನು ರೂಪೀಕರಿಸಲಾಗಿದೆ.

## ಉದ್ದೇಶಗಳು

- ಮೌಲ್ಯಾತರಿದ ಶಿಕ್ಷಣವನ್ನು ಪಡೆದು ಭವಿಷ್ಯದಲ್ಲಿ ಉತ್ತಮ ಪ್ರಜೆಗಳಾಗಿ ಬದುಕಿ ಬಾಳುವುದು.
- ಸಮಾಜಕ್ಕೆ ದಾರಿದೀಪವಾಗುವ ಮಾದರಿ ವಿದ್ಯಾರ್ಥಿಗಳ ರೂಪೀಕರಣ.
- ತಾಳ್ಮೆ, ಶಿಸ್ತು, ಸಮಯ ಪ್ರಜ್ಞೆ ಇತ್ಯಾದಿಗಳ ಅಗತ್ಯತೆಯ ಕುರಿತು ಧನಾತ್ಮಕ ಚಿಂತನೆಯನ್ನು ಕೈಗೊಳ್ಳುವ ವಿದ್ಯಾರ್ಥಿಗಳ ಸಜ್ಜೀಕರಣ.
- ಸ್ವಂತ ಮತ್ತು ಸದೃಢ ನಿರ್ಧಾರವನ್ನು ಕೈಗೊಳ್ಳುವ ಸಾಮರ್ಥ್ಯವನ್ನು ಗಳಿಸುವುದು.
- ಓದುವಿಕೆ ಮತ್ತು ಬರವಣಿಗೆಯಲ್ಲಿ ಅಭಿವೃದ್ಧಿಯನ್ನು ಕಾಣಲು ಸಾಧ್ಯವಾಗಿಸುವುದು.
- ಇಂಗ್ಲಿಷ್ ಭಾಷೆಯಲ್ಲಿ ಹೆಚ್ಚಿನ ಆಸಕ್ತಿ ತೋರಿಸಿ ಸಂದರ್ಭಕ್ಕನುಸರಿಸಿ ವ್ಯವಹರಿಸಲು ಮಕ್ಕಳನ್ನು ಪ್ರಾತರನ್ನಾಗಿಸುವುದು.
- ಭಾಷೆ ವ್ಯವಹಾರಗಳು ಉತ್ತಮ ಮಟ್ಟದಲ್ಲಿ ತಲುಪುವಂತಾಗಿಸುವುದು.
- ಜ್ಞಾನ ಅರ್ಜಿಸಿಕೊಳ್ಳುಲಿರುವ ಚಟುವಟಿಕೆಗಳಲ್ಲಿ ಭಾಗಿಯಾಗಿ ಸ್ವಂತಿಕೆಯನ್ನು ಗಳಿಸಲಿರುವ ಸಾಮರ್ಥ್ಯವನ್ನು ವಿದ್ಯಾರ್ಥಿಗಳಲ್ಲಿ ಉಂಟು ಮಾಡುವುದು
- ಪರಿಸರದೊಂದಿಗೆ ಬೆರೆತು ಪ್ರಯೋಜಕ ಪ್ರಾಯೋಗಿಕತೆಯೊಂದಿಗೆ ಬದುಕು ಸಾಗಿಸುವ ಸಾಮರ್ಥ್ಯವನ್ನು ಗಳಿಸುವುದು.
- ಯುಕ್ತಿ ಪರವಾದ ಚಿಂತನೆಯೊಂದಿಗೆ ಗಣಿತ ಆಶಯ ಅರ್ಥೈಸಿಕೊಳ್ಳಲಿರುವ ಆಸಕ್ತಿಯೊಂದಿಗೆ ಸಾಂದರ್ಭಿಕ ಜೀವನದಲ್ಲಿ ಗಣಿತಕ್ಕೆ ಮಹತ್ತರ ಪಾತ್ರವಿದೆ ಎಂಬ ಅರಿವನ್ನು ಮೂಡಿಸುವುದು.

# ACADEMIC MASTER PLAN 2025-26

| ಉದ್ದೇಶ | ಚಟುವಟಿಕೆ | ಕಾಲಾವಧಿ | ಆರ್ಥಿಕತೆ |
|---|---|---|---|
| ರಜಾಕಾಲ ಬಳಿಕ ಮಕ್ಕಳಿಕ ಶೈಕ್ಷಣಿಕ ಗುಣಮಟ್ಟದ ನಿರ್ಧಾರ | * ಪ್ರೀಟೆಸ್ಟ್ ನಡೆಸುವುದು. ಓದು ಬರವಣಿಗೆಯ ಗುಣಮಟ್ಟವನ್ನು ಅಳೆಯಲು ಜೂನ್ ಮೊದಲ ವಾರದಲ್ಲಿ ನಡೆಸುವುದು. ಅದನ್ನು ಸೂಕ್ತ ರೀತಿಯಲ್ಲಿ ದಾಖಲಿಸುವುದು. | ಜೂನ್ | ಪಿ.ಟಿ.ಎ |
| **ಭಾಷೆ** | | | |
| ಓದುವಿಕೆ ಮತ್ತು ಬರವಣಿಗೆಯ ಸಾಮರ್ಥ್ಯವನ್ನು ಗಳಿಸಲು. | 1. ದಿನಕ್ಕೊಂದು ಕಥೆ<br>2. ಭಾಷಾ ಅಸೆಂಬ್ಲಿ<br>3. ಮಧುರ ಕನ್ನಡ<br>4. ಲೈಬ್ರರಿ ಸಜ್ಜೀಕರಣ<br>5. ಓದಿನ ಟಿಪ್ಪಣಿ<br>6. ಶಾಲಾ ಮ್ಯಾಗಸಿನ್<br>7. ಹಸ್ತ ಪತ್ರಿಕೆ<br>8. ಭಿತ್ತಿ ಪತ್ರಿಕೆ<br>9. ಬಾಲ ಸಭೆ<br>10. ದಿನಾಚರಣೆಗಳ ವರದಿ ಬರೆಸುವುದು.<br>11. ಅಸೆಂಬ್ಲಿಯಲ್ಲಿ ಪತ್ರಿಕಾ ವರದಿ ಓದುವುದು.<br>12. ಪದಕಾರ್ಡಿನಿಂದ ವಾಕ್ಯ ತಯಾರಿಸುವುದು<br>13. ಪದಕಾರ್ಡು ತಯಾರಿ<br>14. ಸಂದರ್ಶನ<br>15. ಪತ್ರಿಕಾ ವರದಿ ಸಂಗ್ರಹ<br>16. ಶುಭಾಶಯ ಪತ್ರ ತಯಾರಿ<br>17. ತಯಾರಿಸಿದ ಉತ್ಪನ್ನಗಳ Documentation ICT ಸಹಾಯದಿಂದ ಪ್ರದರ್ಶಿಸುವುದು | ಜೂನ್‌ನಿಂದ ಮಾರ್ಚ್ | ಪಿ.ಟಿ.ಎ. ಬಿ.ಆರ್.ಸಿ. ಎಸ್.ಎಸ್.ಕೆ |

| English | | | |
|---|---|---|---|
| **Aims** | **Activities** | **Duration** | **Finance** |
| In sufficient Vocabulary | 1. Word game<br>2. Word study using ICT<br>3. Making cross word puzzle<br>4. Dictionary making by referring the word from the text Books. | June to March | PTA<br>BRC<br>SSK |
| Lack of communi-cation skill | 1. Language Lab<br>2. English Assembly (Weekly)<br>3. Spoken English Class.<br>4. One day English School.<br>5. Dramatisation of stories and enacting them.<br>6. Conducting debates and seminars.<br>7. Conducting English fest.<br>8. Developing translation skills | June to March | PTA<br>BRC<br>SSK |
| Pronounciation | 1. Audio Vidio dipping on correct pronounciation<br>2. Classes on phonetics by experts.<br>3. Practicing song/action songs. | June to March | PTA<br>BRC<br>SSK |

| | | | |
|---|---|---|---|
| | **ಪರಿಸರ** | | |
| **ಉದ್ದೇಶ** | **ಚಟುವಟಿಕೆ** | **ಕಾಲಾವಧಿ** | **ಆರ್ಥಿಕತೆ** |
| 1. ಪ್ರಕೃತಿ ಸಂಪತ್ತನ್ನು ಸಂರಕ್ಷಿಸುವುದು.<br>2. ಸರಳ ಪ್ರಯೋಗಗಳಲ್ಲಿ ಆಸಕ್ತಿ ಮೂಡಿಸುವುದು<br>3. ಪ್ರಕೃತಿ ಸಂಪತ್ತನ್ನು ಸಂರಕ್ಷಿಸುವುದು. | 1. ತಿಂಗಳಿಗೊಂದು ಪ್ರಯೋಗ<br>2. ಪ್ರಯೋಗ ಟಿಪ್ಪಣಿ ತಯಾರಿ<br>3. ಪರಿಸರ ರಸಪ್ರಶ್ನೆ<br>4. ದಿನಾಚರಣೆಗಳು<br>5. ಬಯಲು ಪ್ರವಾಸ<br>6. ಪೋಸ್ಟರ್ ತಯಾರಿ<br>7. ಕೃಷಿ ಸ್ಥಳ ಸಂದರ್ಶನ<br>8. ಸಂದರ್ಶನ ಟಿಪ್ಪಣಿ ತಯಾರಿ<br>9. ಹಸ್ತ ಪತ್ರಿಕೆ ತಯಾರಿ<br>10. ವಿಜ್ಞಾನಿಗಳ ಚಿತ್ರ ಸಂಗ್ರಹ (ICT Presentation)<br>11. ಮ್ಯಾಗಸಿನ್ ತಯಾರಿ<br>12. ಹೂದೋಟ ನಿರ್ಮಾಣ<br>13. ಬೆಂಕಿ ಇಲ್ಲದ ಅಡುಗೆ<br>14. ಔಷಧಿ ವನ ನಿರ್ಮಾಣ<br>15. ಬಯೋ ಡೈವರ್ಸಿಟಿ ಪಾರ್ಕ್<br>16. ಭೂಪಟ ಅಧ್ಯಯನ<br>17. ಆಲ್ಬಮ್ ತಯಾರಿ<br>18. ಎಕ್ಸಿಬಿಶನ್ | ಜೂನ್‌ನಿಂದ<br>ಮಾರ್ಚ್ | ಪಿ.ಟಿ.ಎ.<br>ಬಿ.ಆರ್.ಸಿ.<br>ಎಸ್.ಎಸ್.ಕೆ |
| | **ಗಣಿತ** | | |
| * ಕಲಿಕೋಪಕರಣಗಳ ಮೂಲಕ ಗಣಿತ ಕಲಿಕೆ.<br>* ಗಣಿತವನ್ನು ಆಸಕ್ತಿದಾಯಕವಾಗಿ ಮಾಡುವುದು. | 1. ದಿನಕ್ಕೊಂದು ಜಾಣ್ಮೆ ಲೆಕ್ಕ<br>2. ಉಲ್ಲಾಸ ಗಣಿತ<br>3. ವಾರಕ್ಕೊಂದು ರಸಪ್ರಶ್ನೆ<br>4. ಗಣಿತ ಮ್ಯಾಗಸಿನ್<br>5. Maths Bulletin Board<br>6. ಮೋಜಿನ ಗಣಿತ<br>7. ನನ್ನ ಪರಿಸರ ಗಣಿತ ಚಟುವಟಿಕೆ | | |

| ಉದ್ದೇಶ | ಚಟುವಟಿಕೆ | ಕಾಲಾವಧಿ | ಆರ್ಥಿಕತೆ |
|---|---|---|---|
| * ಚಿಂತನ ಸಾಮರ್ಥ್ಯ ಯುಕ್ತಿಯನ್ನು ಕಂಡುಹಿಡಿಯುವಂತೆ ಪ್ರೋತ್ಸಾಹಿಸುವುದು.<br>* ಜ್ಯಾಮಿತಿಯ ಸೌಂದರ್ಯವನ್ನು ತಿಳಿದುಕೊಂಡು ರಚನೆಯಲ್ಲಿ ತೊಡಗಿಸಿಕೊಳ್ಳುವುದು. | 8. ಅಸೆಂಬ್ಲಿಯಲ್ಲಿ ಗಣಿತ ರಸಪ್ರಶ್ನೆ<br>9. ಜ್ಯಾಮಿತಿಯ ರೂಪಗಳ ತಯಾರಿ.<br>10. ಕಲಿಕೋಪಕರಣಗಳ ಕಾರ್ಯಗಾರ<br>11. ಗಣಿತ ಲ್ಯಾಬು ಸಜ್ಜೀಕರಣ<br>12. ತರಗತಿಯಲ್ಲಿ ವ್ಯಾಪಾರ.<br>13. ಒರಿಗಾಮಿ ಆಕೃತಿಗಳ ರಚನೆ.<br>14. ಐಸಿಟಿಯಲ್ಲಿ Geogebra ಉಪಯೋಗ.<br>15. ಗಣಿತ ದಿನಾಚರಣೆಗಳ ಆಚರಣೆ<br>16. ಗಡಿಯಾರ ತಯಾರಿ<br>17. ಕ್ಯಾಲೆಂಡರ್ ತಯಾರಿ<br>18. ಮ್ಯಾಕ್ಸ್ ಕಾರ್ನರ್ | ಜೂನ್‌ನಿಂದ ಮಾರ್ಚ್ | ಪಿ.ಟಿ.ಎ.<br>ಬಿ.ಆರ್.ಸಿ.<br>ಎಸ್.ಎಸ್.ಕೆ |
| **ಕಲೆ, ವರ್ಕ್ ಎಕ್ಸ್‌ಪೀರಿಯೆನ್ಸ್, ಕ್ರೀಡೆ** | | | |
| *ವ್ಯಕ್ತಿ ಶುಚಿತ್ವದೊಂದಿಗೆ ಆರೋಗ್ಯವನ್ನು ಕಾಪಾಡುವುದು ಅಗತ್ಯವಾಗಿದೆ.<br>* ನಮ್ಮ ಆರೋಗ್ಯಕ್ಕೆ ವ್ಯಾಯಾಮದ ಅಗತ್ಯವಿದೆ. | 1. ಮಾಸ್ ಡ್ರಿಲ್<br>2. ಯೋಗ<br>3. ಸೈಕಲ್ ಸವಾರಿ<br>4. ಗ್ರಾಮೀಣ ಆಟಗಳ ಪರಿಚಯ<br>5. ಕರಾಟೆ ತರಬೇತಿ | ಜೂನ್‌ನಿಂದ ಮಾರ್ಚ್ | |
| * ಶಿಲ್ಪಕಲೆ ಚಿತ್ರಕಲೆಗಳು ನಮ್ಮ ಸಂಸ್ಕೃತಿಯ ಭಾಗವಾಗಿದೆ.<br>ಉಪಯೋಗ ಶೂನ್ಯ ವಸ್ತುಗಳಿಂದ ಆಕೃತಿಗಳ ನಿರ್ಮಾಣ ಸಾಧ್ಯ | 1. ವಾರಕ್ಕೊಂದು ಡ್ರಾಯಿಂಗ್ ತರಬೇತಿ<br>2. ಐಸಿಟಿಯ ಸಹಾಯದಿಂದ ಚಿತ್ರರಚನೆ.<br>3. ಚಿತ್ರಗಳ ಹಸ್ತಪತ್ರಿಕೆ.<br>4. ಶೈಕ್ಷಣಿಕ ಪ್ರವಾಸ.<br>5. ಯಕ್ಷಗಾನ ತರಬೇತಿ. | | |

ವೇಸ್ಟ್ ಮೆಟೀರಿಯಲ್ಸ್ ನಿಂದ ಆಕೃತಿಗಳ ತಯಾರಿ

| ಉದ್ದೇಶ | ಚಟುವಟಿಕೆ | ಕಾಲಾವಧಿ | ಆರ್ಥಿಕತೆ |
|---|---|---|---|
| * ಉಪಯೋಗ ಶೂನ್ಯ ವಸ್ತುಗಳಿಂದ ಆಕೃತಿಗಳ ನಿರ್ಮಾಣ ಸಾಧ್ಯ. | 1. ವೇಸ್ಟ್ ಮೆಟೀರಿಯಲ್ಸ್‌ನಿಂದ ಆಕೃತಿಗಳ ತಯಾರಿ<br>2. ಕಾರ್ಯಗಾರ ನಡೆಸುವುದು.<br>3. ಮನೆಯಿಂದ ಆಕೃತಿಗಳ ತಯಾರಿ<br>4. ನುರಿತ ವ್ಯಕ್ತಿಗಳಿಂದ ತರಬೇತಿ ನೀಡುವುದು | ಜೂನ್‌ನಿಂದ ಮಾರ್ಚ್ | ಪಿ.ಟಿ.ಎ.<br>ಬಿ.ಆರ್.ಸಿ.<br>ಎಸ್.ಎಸ್.ಕೆ |

## ನಿಗಮನ

* ಮಕ್ಕಳು ಕಲಿಕೆಯಲ್ಲಿ ಆಸಕ್ತಿದಾಯಕವಾಗಿ ಭಾಗವಹಿಸುವುದು.
* ನಿರ್ಭಯ ವಾತಾವರಣದಲ್ಲಿ ಮಗು ಸುಗಮವಾಗಿ ಸ್ವತಂತ್ರವಾಗಿ ಕಲಿಕೆಗೆ ಅವಕಾಶ ನೀಡುವುದು.
* ನಿತ್ಯ ಜೀವನದಲ್ಲಿ ಶಿಸ್ತು ಸಂಯಮ ಸಮಯ ಪ್ರಜ್ಞೆ ಸರಿಯಾಗಿ ಪಾಲಿಸುವುದು.
* ಓದುವಿಕೆ ಮತ್ತು ಬರವಣಿಗೆಯಲ್ಲಿ ಸಮರ್ಥರಾಗಿ ಆಶಯವನ್ನು ಮಂಡಿಸುವುದು.
* ಭಾಷೆ, ಗಣಿತ, ಪರಿಸರ ವಿಷಯಗಳಲ್ಲಿ ಸಮರ್ಥರಾಗುವುದು.
* ಹಿರಿಯರನ್ನು ಗೌರವಿಸುವುದು, ಪರಿಸರ ಸ್ನೇಹಿಯಾಗಿ ಬಾಳುವುದು ಸಂಶೋಧನಾತ್ಮಕ ಮನೋಭಾವ ಹೊಂದುವುದು.